ದಿನಾಂಕಃ **17.03.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಎಂ ಪಿ ಎಂ ವಕೀಲರಿಂದಃ-

ನೀವು ಈ ದಾವೆಯನ್ನು ಯಾವ ಪರಿಹಾರ ಕೋರಿ ಹೂಡಿರುತ್ತೀರಿ ಎಂದರೆ ಸಾಕ್ಷಿಯು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಹೂಡಿರುತ್ತೇನೆ. ದಾವಾ ಆಸ್ತಿಯು ಮಂಗೇನಹಳ್ಳಿಯಲ್ಲಿರುತ್ತದೆ. ಸರ್ವೆ ನಂ 39ಃ6 ರಲ್ಲಿ 2 ಎಕರೆ 39 ಗುಂಟೆ ಆಗಿರುತ್ತದೆ. ದಾವಾ ಆಸ್ತಿಯ ಹಳೇ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಃ ರಸ್ತೆ, ದಕ್ಷಿಣಕ್ಕೆ ಃ ಸೂರಪ್ಪ ರವರ ಆಸ್ತಿ, ಉತ್ತರಕ್ಕೆಃ ಖಾಸಗಿ ಸ್ವತ್ತು, ಪಶ್ಚಿಮಕ್ಕೆ ಃ ದೇವನೂರು ಗಡಿ ಇರುತ್ತದೆ. ಈಗಲೂ ಈ ಮೇಲೆ ಹೇಳಿದ ಚಕ್ಕುಬಂಧಿ ಅಸ್ತಿತ್ವದಲ್ಲಿರುತ್ತದೆ. ನನ್ನ ಹೆಸರು ಕರಿಯಪ್ಪ ಅದೇ ರೀತಿ ನನ್ನ ತಂದೆ ಹೆಸರು ಕರಿಯಪ್ಪ ಎಂದರೆ ಸರಿ. ನನ್ನ ತಂದೆಯವರು ದಿಃ 09.06.1973 ರಲ್ಲಿ ಮರಣಹೊಂದಿರುತ್ತಾರೆ. ನನ್ನ ತಂದೆಯವರು ಜಮೀನನ್ನು ಯಾವ ಸಾಲಿನಲ್ಲಿ ಖರೀದಿ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ನುಡಿಯುತ್ತಾರೆ. 1955 ರಿಂದ ನನ್ನ ತಂದೆ ಹೆಸರಿಗೆ ಬಂದಿರುತ್ತದೆ. ನನ್ನ ವಾದಪತ್ರದಲ್ಲಿ ದಿಃ 11.09.1973 ರಲ್ಲಿ ಮರಣ ಹೊಂದಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ತಂದೆಯವರು ಅದೇ ದಿನ ಮರಣ ಹೊಂದಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ, ನನ್ನ ಬಳಿ ಮರಣ ಪ್ರಮಾಣಪತ್ರ ಇರುತ್ತದೆ ಎಂದು ನುಡಿಯುತ್ತಾರೆ.

ನನ್ನ ತಾಯಿ ಹೆಸರು ಹನುಮಮ್ಮ ಎಂದರೆ ಸರಿ. ನನ್ನ ತಂದೆಯವರಿಗೆ ನಾನೂ ಸೇರಿ 3 ಜನ ಮಕ್ಕಳು, ಅವರುಗಳೆಂದರೆ ಪುಟ್ಟಪ್ಪ, ಶಂಕ್ರಪ್ಪ ಮತ್ತು ನಾನು. ನನ್ನ ಹುಟ್ಟಿದ ದಿಃ 28.12.1955 ಆಗಿರುತ್ತದೆ. 1971 ನೇ ಇಸವಿಯಲ್ಲಿ ನನಗೆ 13 ರಿಂದ 15 ವರ್ಷ ವಯಸ್ಸು ಎಂದರೆ ಸಾಕ್ಷಿ ನಾನು 10 ನೇ ತರಗತಿ ಓದುತ್ತಿದ್ದೆ, ನಾನು ಅಲ್ಪವಹಿಯಾಗಿದ್ದೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಮರಣಾನಂತರ ನಾನು, ನನ್ನ ತಾಯಿ ಹನುಮಮ್ಮ, ಅಣ್ಣ ಪುಟ್ಟಪ್ಪ, ಶಂಕ್ರಪ್ಪ, ಕರಿಯಪ್ಪ ರವರು ಸೇರಿ 1 ನೇ ಪ್ರತಿವಾದಿ ತಂದೆ ಗಂಗಾಧರಪ್ಪ ರವರಿಗೆ ದಿಃ 08.10.1971 ರಂದು ನೋಂದಾಯಿತ ಕ್ರಯಪತ್ರ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ನನ್ನ ತಾಯಿ ಹನುಮಮ್ಮ ರವರು ದಾವಾ ಆಸ್ತಿ ನನ್ನ ತಂದೆ ಹೆಸರಿನಲ್ಲಿದ್ದು ಪೌತಿ ಯಾನೆ ಅವರ ಸ್ವಾದೀನದಲ್ಲಿರುವ ಆಸ್ತಿಯನ್ನು ಪ್ರತಿವಾದಿಯ ತಂದೆ ಗಂಗಾಧರಪ್ಪ ರವರಿಗೆ ಮಾರಾಟ ಮಾಡಿರುವ ಬಗ್ಗೆ ನಮೂದು ಇದೆ ಎಂದರೆ ಸರಿಯಲ್ಲ. ಕ್ರಯಪತ್ರ ಆದ ದಿನದಿಂದಲೂ ಪ್ರತಿವಾದಿಯ ತಂದೆ ಮತ್ತು 1 ನೇ ಪ್ರತಿವಾದಿ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾದೀನ ಹೊಂದಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಯ ತಂದೆಯ ಮುಗ್ದತೆ ಮತ್ತು ಅನಕ್ಷರತೆಯ ಕಾರಣದಿಂದ ಖಾತೆ ಬದಲಾವಣೆ ಮಾಡದೇ ಇರುವುದನ್ನು ದುರುಪಯೋಗಪಡಿಸಿಕೊಂಡು ನನ್ನ

ಹೆಸರಿಗೆ ಪೌತಿ ಖಾತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಕಾನೂನು ಬಾಹಿರವಾಗಿ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ಮಾಡಿ ದಾವಾ ಆಸ್ತಿಯ ಸ್ವಾದೀನ ಇರದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿಗೂ ಪ್ರತಿವಾದಿಯವರು ದಾವಾ ಆಸ್ತಿಯ ಸ್ವಾದೀನ ಹೊಂದಿ ಕಂದಾಯ ಪಾವತಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕಡೂರಿನ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 118ಃ2025 ರಂತೆ ನನ್ನ ವಿರುದ್ಧ ಘೋಷಣಾತ್ಮಕ ಪರಿಹಾರ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಅವರು ಸುಳ್ಳು ದಾವೆ ಹೂಡಿರುತ್ತಾರೆ. ನನ್ನ ವಾದ ಪತ್ರದಲ್ಲಿ ಹೇಳಿದಂತೆ ದಿಃ 11.09.1973 ರಂದು ನನ್ನ ತಂದೆಯವರು ಮರಣಹೊಂದಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆಯವರು ದಿಃ 11.09.1973 ರ ಹಿಂದೆಯೇ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.